# ರೋಸ್ ಗೋಲ್ಡ್

■ ರೂಪಾ ಕೆ.ಎಂ.

ಕೆನ್ನೆಯನ್ನು 'ರೋಸ್' ಪೌಡರ್‌ನಿಂದ ತುಸು ಹೆಚ್ಚೇ ಕೆಂಪಗಾಗಿಸಿ, ಕೆನ್ನೆ ಕೊಂಚ ಕೆಂಪಾಯಿತೇ, ತುಟಿಯ ರಂಗು ಹೆಚ್ಚೇ ಅಂತೆಲ್ಲ ಗುನುಗಿಕೊಳ್ಳುವ ಕಾಲವೊಂದಿತ್ತು. ಆದರೆ, ಕೆನ್ನೆಯ ರಂಗನ್ನು ಹೆಚ್ಚಿಸಲು ಮಾರುಕಟ್ಟೆಯಲ್ಲಿ ತರಹೇವಾರಿ ಪ್ರಸಾಧನಗಳು ಬಂದಿವೆ. ಈಗ ಮತ್ತೆ ಹೆಣ್ಣುಮಕ್ಕಳ 'ಫ್ಯಾಷನ್' ಆಕ್ಸೆಸರೀಸ್‌ನಲ್ಲಿ 'ರೋಸ್' ಜಾಗ ಪಡೆದಿದೆ. ಮೋಹಕ ಉಡುಗೆಗೆ ಕಳೆ ತರಿಸುವ 'ರೋಸಿ ರೋಸಿ' ಎನಿಸುವ ರೋಸ್‌ಗೋಲ್ಡ್ ಆಭರಣಗಳು ಸದ್ಯದ ಟ್ರೆಂಡ್ ಎನಿಸಿವೆ.

'ಗುಲಾಬಿ ಬಣ್ಣ'ವೆಂದರೆ ನಯ, ಮೃದು, ಹೆಣ್ತನ, ಪ್ರೀತಿ, ಮೋಹಕತೆಯ ಸಂಕೇತವೆಂದೇ ಭಾವಿಸಲಾಗುತ್ತದೆ. ಚಿನ್ನವೆಂದರೆ ಅಪ್ಪಟ್ಟ ಹಳದಿ ಬಣ್ಣದ್ದಾಗಿರಬೇಕು ಎಂಬ ಮಿಥ್ಯೆಯನ್ನು ಮೀರಿದ ಮೋಹಕ ಒಡವೆಯೇ 'ರೋಸ್‌ಗೋಲ್ಡ್'. ಚಿನ್ನವೆಂದರೆ ಚಿನ್ನವೆ. ಆದರೆ, ಸಂಪೂರ್ಣ ಚಿನ್ನವಲ್ಲ. ಚಿನ್ನ ಮತ್ತು ತಾಮ್ರ ಅಥವಾ ಬೆಳ್ಳಿಯನ್ನು ಮಿಶ್ರಣ ಮಾಡಿ, ರೂಪುಗೊಂಡಿರುವ ಒಡವೆಯಿದು. ಸುಮಾರು ಶೇ 75ರಷ್ಟು ಚಿನ್ನ ಬಳಕೆಯಾಗಿ, 25ರಷ್ಟು ತಾಮ್ರ ಬಳಕೆಯಾದರೆ ಅದು ಉತ್ತಮ ದರ್ಜೆಯ ರೋಸ್‌ಗೋಲ್ಡ್ ಎನಿಸಿಕೊಳ್ಳುತ್ತದೆ. ಈ ಮಿಶ್ರಣದ ಮೇಲೆ ಅದರ ಶುದ್ಧತೆ ನಿರ್ಧಾರಗೊಳ್ಳುತ್ತದೆ.

19ನೇ ಶತಮಾನದಲ್ಲಿ ರಷ್ಯಾದಲ್ಲಿ ಚಾಲ್ತಿಯಲ್ಲಿದ್ದ ಈ ಆಭರಣವು ಸದ್ಯಕ್ಕೆ ಎಲ್ಲ ವರ್ಗದ ಮಹಿಳೆಯರ ಅಚ್ಚುಮೆಚ್ಚಾಗಿದೆ. ಅದರಲ್ಲಿಯೂ ಮದುಮಗಳ ಆಭರಣವಾಗಿಯೂ ಪ್ರಸಿದ್ಧಿ ಪಡೆಯುತ್ತಿದೆ. 2015ರಿಂದೀಚೆಗೆ 'ಪಾಪ್' ಸಂಸ್ಕೃತಿಯ ಭಾಗವಾಗಿಯೂ ಈ ಆಭರಣ ಯುವ ಮನಸ್ಸನ್ನು ಸೆಳೆದಿದೆ.

**ಸಿಂಪಲ್ ಸರಗಳು:** ಸರಳ ವಿನ್ಯಾಸಕ್ಕೂ ಸೈ, ಬೃಹತ್ ಗಾತ್ರದಲ್ಲಿಯೂ ರೋಸ್‌ಗೋಲ್ಡ್ ಚಂದ ಕಾಣುತ್ತದೆ. ಬಹಳ ಸರಳವೆನಿಸುವ ಒಂದೆಳೆ ಚೈನ್‌ನಿಂದ ಹಿಡಿದು ಕೆಂಪು, ಹಸಿರು ಕಲ್ಲುಗಳಿರುವ ಎಳೆ ಎಳೆಯಂಥ ದೊಡ್ಡ ಗಾತ್ರದ ಸರಗಳು ರೋಸ್‌ಗೋಲ್ಡ್‌ನಲ್ಲಿವೆ. ಸೀರೆಯೇ ಇರಲಿ, ಪಾಶ್ಚಿಮಾತ್ಯ ಉಡುಗೆಯೇ ಇರಲಿ; ಎರಡು ದಿರಿಸುಗಳಿಗೂ ಈ ಆಭರಣ ಹೆಚ್ಚು ಒಪ್ಪುತ್ತದೆ. ಕಪ್ಪುಬಣ್ಣದ ಕ್ರಾಪ್ ಟ್ರಾಪ್ ಮೇಲೆ ಸರಳವೆನಿಸುವ ರೋಸ್‌ಗೋಲ್ಡ್ ಚೈನ್ ಧರಿಸಿದರೆ ಮುದ್ದಾಗಿ ಕಾಣಬಹುದು. ಹಾಗೆಯೇ ಸೀರೆಯ ಮೇಲೆ ಬೇರೆ ಬೇರೆ ಹರಳು ಹಾಕಿ ಮಾಡಿದ ನೆಕ್ಲೇಸ್‌ಗಳು ಹೊಂದಿಕೆಯಾಗುತ್ತವೆ.

**ರಿಂಗ್‌ಗಳು:** ಎಂಗೇಜ್‌ಮೆಂಟ್ ರಿಂಗ್‌ಗಳಲ್ಲಿ ರೋಸ್‌ಗೋಲ್ಡ್‌ಗೆ ಆದ್ಯತೆ ಹೆಚ್ಚುತ್ತಿದ್ದು, ಹೆಚ್ಚು ದುಬಾರಿ ಲುಕ್‌ನಲ್ಲಿ ಕಾಣುತ್ತದೆ. ಹೆಚ್ಚಾಗಿ ಬಿಳಿ ಬಣ್ಣದ ಹರಳುಗಳಲ್ಲಿರುವ, ವಜ್ರದ ಹರಳುಗಳಿರುವ ರೋಸ್‌ಗೋಲ್ಡ್ ವಿನ್ಯಾಸಗಳಿಗೆ ಉತ್ತಮ ಬೇಡಿಕೆ ಇದೆ.

**ಕಿವಿಯೋಲೆಗಳು:** ಸಣ್ಣಪುಟ್ಟ ಸ್ಟಡ್‌ಗಳು, ಚಾಂಡೇಲಿಯರ್, ಜುಮ್ಕಾಗಳಲ್ಲಿಯೇ ಬೇರೆ ಬೇರೆ ವಿನ್ಯಾಸಗಳಲ್ಲಿರುವ ಕಿವಿಯೋಲೆಗಳು ಯುವ ಮನಸ್ಸನ್ನು ಆಕರ್ಷಿಸುತ್ತಿವೆ. ಕ್ಯಾಷುವಲ್ ವೇರ್ ಇರಲಿ, ಆಫೀಸ್ ವೇರ್ ಇರಲಿ ಅಥವಾ ಸಮಾರಂಭಗಳಿಗೂ ಈ ಆಭರಣಗಳನ್ನು ತೊಟ್ಟುಕೊಳ್ಳಬಹುದು.

## ಯಾರಿಗೆ ಹೆಚ್ಚು ಸೂಕ್ತ?

ಚರ್ಮದ ಅಲರ್ಜಿ ಇಲ್ಲದೇ ಇರುವವರಿಗೆ ಇದು ಹೊಂದುತ್ತದೆ. ಚಿನ್ನೇತರ ಆಭರಣ, ತಾಮ್ರ ಧರಿಸಿದಾಗ ಯಾವುದೇ ಅಲರ್ಜಿ ಕಂಡುಬರದೇ ಇದ್ದವರು ಆರಾಮಾಗಿ ಧರಿಸಬಹುದು. ಮಾರುಕಟ್ಟೆಯಲ್ಲಿ ಸಿಗುವ ರೋಸ್‌ಗೋಲ್ಡ್ ಗುಣಮಟ್ಟವನ್ನು ಅರಿತುಕೊಳ್ಳಿ. ಕಡಿಮೆ ದರ್ಜೆಯ ರೋಸ್‌ಗೋಲ್ಡ್‌ಗಳನ್ನು ಧರಿಸುವುದರಿಂದ ಅಲರ್ಜಿ ಉಂಟಾಗುವ ಸಾಧ್ಯತೆ ಇರುತ್ತದೆ ಮತ್ತು ಬೇಗ ಕಪ್ಪಾಗಬಹುದು. ಹಾಗಾಗಿ ಈ ಆಭರಣಗಳಿಗೆ ಚಿನ್ನಕ್ಕಿಂತ ತುಸು ಹೆಚ್ಚೇ ಕಾಳಜಿ ವಹಿಸುವ ಅಗತ್ಯವಿರುತ್ತದೆ. ಅಪಾಯಕಾರಿ ರಾಸಾಯನಿಕ ಅಂಶಗಳಿಂದ ಇವುಗಳನ್ನು ದೂರವಿಡಬೇಕು. ನಿತ್ಯ ಉಪಯೋಗದಿಂದ ಮಾಸು ಬಣ್ಣ ಬಂದಿದ್ದರೆ, ಬೆಚ್ಚಗಿನ ನೀರಿನಲ್ಲಿ 10 ನಿಮಿಷಗಳ ಕಾಲ ನೆನೆಸಿ, ಮೃದು ಬ್ರಷ್‌ನಲ್ಲಿ ಉಜ್ಜಬೇಕು. ನಂತರ ಗಾಳಿಯಾಡಲು ಬಿಡಬೇಕು. ■

